# ಸ್ವಾಮಿ ಅಶೇಷಾನಂದ (೧೮೯೯ - ೧೯೯೬)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ ३**

### ಗೋಲಾಪ್ ಮಾ ಪ್ರಸಂಗ

**ಉದ್ಬೋಧನ, ೯.೦೭.೧೯೨೨, ರವಿವಾರ**

ನಿನ್ನೆ ರಾತ್ರಿಯಿಂದ ಗೋಲಾಪ್ ಮಾ ವಾಂತಿ-ಭೇದಿಗಳಿಂದ ಕಷ್ಟಪಡುತ್ತಿದ್ದಾರೆ. ಶರತ್ ಮಹಾರಾಜರ ಆದೇಶದಂತೆ ನಾನವರ ಸೇವೆಯನ್ನು ಮಾಡಿದೆ. ಅವರ ಕೈ-ಕಾಲುಗಳನ್ನು ನೇವರಿಸಿದೆ. ಅವರ ಸೇವೆಗೈದು ಧನ್ಯನಾದೆ. ಅವರು ಶ್ರೀಮಾತೆಯವರಂತೆಯೇ ಇರುವಂತೆ ತೋರತೊಡಗಿತು. ಗೋಲಾಪ್ ಮಾ ಒಮ್ಮೆ ನನಗೆ ಹೇಳಿದರು, '' 'ನಾನು ಕಾಮವನ್ನು ಜಯಿಸಿರುವೆ' ಎಂದೂ ಎಂದಿಗೂ ಹೇಳಬೇಡ. ಹಾಗೆ ಹೇಳಿದ ಮಾತ್ರಕ್ಕೆ ಕಾಮವು ತಲೆದೋರುತ್ತದೆ.'' ಶ್ರೀರಾಮಕೃಷ್ಣ, ಜಗನ್ನಾಥ, ಬಾಲಗೋಪಾಲರ ದರ್ಶನದ ಬಗ್ಗೆ ಅವರು ನನಗೆ ಹೇಳಿದ್ದರು.

**ಬುಧವಾರ, ೧३ ಜೂನ್ ೧೯೨३**

ದೇವರಕೋಣೆಯಲ್ಲಿ ನಾನು ಪ್ರಸಾದವನ್ನು ತೆಗೆದುಕೊಂಡು ಏಳುವಾಗ ಗೋಪಾಲ್ ಮಾ ಅವರ ಹಣೆಗೆ ಏಟು ಬಿತ್ತು. ಅವರು, 'ನಿನ್ನದೇನೂ ದೋಷವಿಲ್ಲ, ನನ್ನದೇ ತಪ್ಪು' ಎಂದರು.

ಠಾಕೂರರ ಸೇವೆಯನ್ನು ಮಾಡುವಾಗ ಗೋಲಾಪ್ ಮಾ ಭಕ್ತರಿಂದ ನಾನಾ ಕಟುಮಾತುಗಳನ್ನು ಸಹಿಸಬೇಕಾಗುತ್ತಿತ್ತು. ''ಯಾರು ಎಲ್ಲವನ್ನೂ ತ್ಯಜಿಸಿ ನನಗೆ ಶರಣಾಗುವರೋ, ಅವರ ದೋಷಗಳನ್ನು ತಿದ್ದದೆ ಅವರನ್ನು ಓಡಿಸಿಬಿಡುವುದು ಒಳ್ಳೆಯದೆ?'' ಎಂದು ಠಾಕೂರರು ಹೇಳಿದ್ದರು. ಶ್ರೀಮಾತೆಯವರು ಒಮ್ಮೆ ಊರಿಗೆ ಹೋಗಿದ್ದಾಗ ಗೋಲಾಪ್ ಮಾ ಠಾಕೂರರಿಗೆ ಮಾಂಸಾಹಾರವನ್ನು ತಯಾರಿಸಿಕೊಟ್ಟಿದ್ದರು. ಠಾಕೂರರ ವಿರಾಟ್ ರೂಪವನ್ನು ದರ್ಶನ ಮಾಡುತ್ತ ಕುಂಡಲಿನಿ ಸರ್ಪದಂತೆ ಅವರ ಒಳಗಿನಿಂದ ಎಲ್ಲವನ್ನೂ ನುಂಗುತ್ತಿರುವುದನ್ನು ಗೋಲಾಪ್ ಮಾ ಕಂಡಿದ್ದರು. 'ಈ ಬ್ರಾಹ್ಮಣ ಮಹಿಳೆ ನಿನ್ನೊಂದಿಗಿರುತ್ತಾಳೆ' ಎಂದು ಠಾಕೂರರು ಶ್ರೀಮಾತೆಯವರಿಗೆ ಹೇಳಿದ್ದರು. ಠಾಕೂರರ ಮಹಾಸಮಾಧಿಯ ಬಳಿಕ ಗೋಲಾಪ್ ಮಾ ಶ್ರೀಮಾತೆಯವರ ಜೊತೆಯಲ್ಲೇ ಇದ್ದರು. ಅವರು ಶ್ರೀಮಾತೆಯವರನ್ನು ಸಾಕ್ಷಾತ್ ದೇವಿಯಂತೆ ಕಾಣುತ್ತಿದ್ದರು.

### ಮಾತೃಪ್ರಸಂಗ

ಶ್ರೀಮಾತೆಯವರನ್ನು ಕುರಿತು ಗಗನ್ ಮಹಾರಾಜ್ (ಸ್ವಾಮಿ ಋತಾನಂದರು): ''ಶ್ರೀಮಾತೆಯವರು ಕಲ್ಕತ್ತೆಯಿಂದ ಕೋಯಲ್ ಪಾರಾಗೆ ಬಂದು ಆನಂತರ ಜಯರಾಂಬಾಟಿಗೆ ಹೋಗುತ್ತಿದ್ದರು. ಬಾಲಕನಾಗಿದ್ದ ನಾನು ಆಗ ಕೋಯಲ್‌ಪಾರಾ ಶಾಲೆಯಲ್ಲಿ ಓದುತ್ತಿದ್ದು ಸ್ವಾಮಿ ಕೇಶವಾನಂದರ ಬಳಿಗೆ ಹೋಗುತ್ತಿದ್ದೆ. ಆಗ ಎತ್ತಿನಗಾಡಿಯಲ್ಲಿ ಕುಳಿತ ಶ್ರೀಮಾತೆಯವರ ದರ್ಶನ ಮಾಡಿದ್ದೆ. ಶ್ರೀಮಾತೆಯವರು ಕೇಳಿದರು, 'ಈ ಹುಡುಗ ಯಾರು? ಒಳ್ಳೆಯವ. ಇಲ್ಲಿ ಇಷ್ಟೊಂದು ಜನರಿದ್ದರೂ ಮತ್ತೆ ಮತ್ತೆ ನನ್ನೆಡೆಗೇ ನೋಡುತ್ತಿದ್ದಾನೆ!' ಅಂದಿನಿಂದ ಕೋತುಲಪುರದಲ್ಲಿ ಕೊಂಡುಕೊಂಡ ಸಾಮಾನುಗಳನ್ನು ಜಯರಾಂಬಾಟಿಯಲ್ಲಿ ಶ್ರೀಮಾತೆಯವರಿಗೆ ಕೊಡಲು ಹೋಗುತ್ತಿದ್ದೆ. ಅವೆಷ್ಟು ಆನಂದದ ದಿನಗಳು!

''ಒಂದು ಸಲ ನನಗೆ ಹುಷಾರು ತಪ್ಪಿತು. ಇನ್ನೇನು ಸತ್ತೇ ಹೋಗುವೆನೆಂದುಕೊಂಡಿದ್ದೆ, ಕೈಕಾಲುಗಳು ತಣ್ಣಗಾಗಿ ಹೋಗಿದ್ದವು. ಪ್ರತಿದಿನವೆಂಬಂತೆ ಶ್ರೀಮಾತೆಯವರು ರಾಧುವಿನ ಮೂಲಕ ಪತ್ರ ಬರೆದು ಕಳುಹಿಸುತ್ತಿದ್ದರು,'ಗಗನ ಹೇಗಿದ್ದಾನೆ?' ನನ್ನ ಆರೋಗ್ಯ ಸುಧಾರಿಸಿದಾಗ ಇಂತಹ ಒಂದೆರಡು ಪತ್ರಗಳನ್ನು ಕಂಡಿದ್ದೆ. ಬಹುಶಃ ಶರತ್ ಮಹಾರಾಜರು ಶ್ರೀಮಾತೆಯವರಿಂದ ನನ್ನ ಆರೋಗ್ಯದ ಬಗ್ಗೆ ತಿಳಿದು ಜಯರಾಂಬಾಟಿಗೆ ಕಳುಹಿಸಿದ ನಾನಾ ಸಾಮಗ್ರಿಗಳೊಂದಿಗೆ ನನಗೋಸ್ಕರ ದಾಳಿಂಬೆ ಹಾಗೂ ಇತರ ಹಣ್ಣುಗಳನ್ನು ಕಳುಹಿಸುತ್ತಿದ್ದರೇನೋ. ಅದನ್ನು ಪಡೆದು ನನಗಾದ ಆನಂದ ಹೇಳತೀರದು! ತಂದೆ, ತಾಯಿಯರೂ ಆ ರೀತಿ ಪ್ರೀತಿಸಲಾರರು.

''ನಂತರ ಶ್ರೀಮಾತೆಯವರು ಹಿಂದಿರುಗಿ ಬಂದಾಗ, 'ಅಯ್ಯೋ, ಗಗನ! ನೀನು ಇಷ್ಟೊಂದು ದುರ್ಬಲನಾಗಿಬಿಟ್ಟಿರುವೆಯಾ? ನಿನ್ನ ಬಗ್ಗೆ ಎಷ್ಟು ಯೋಚನೆಗೀಡಾಗಿದ್ದೆ!' ಎನ್ನುತ್ತ ನನ್ನನ್ನು ತಮ್ಮ ಬಳಿ ಕುಳ್ಳಿರಿಸಿಕೊಂಡು ನನಗೆ ತಿನ್ನಿಸಿದರು, ತಮ್ಮ ಎಲೆಯಿಂದಲೂ ಸ್ವಲ್ಪ ತೆಗೆದು ತಿನ್ನಲು ಕೊಟ್ಟರು.

''ತಮ್ಮಲ್ಲಿಗೆ ಬಂದ ವಸ್ತುಗಳನ್ನೆಲ್ಲಾ ಶ್ರೀಮಾತೆಯವರು ಇತರರಿಗೆ ಹಂಚಿಬಿಡುತ್ತಿದ್ದರು. ತಮ್ಮ ಸೀರೆಯ ಸೆರಗಿನಲ್ಲಿ ಕಡಲೆಪುರಿ ಹಾಗೂ ಮೆಣಸಿನಕಾಯಿಯನ್ನು ಕಟ್ಟಿಕೊಂಡು ತಿನ್ನುತಿದ್ದರು. ನಂತರದ ಕಾಲದಲ್ಲಿ ಅದನ್ನು ಕಲ್ಲಿನಿಂದ ಪುಡಿಮಾಡಿ ತಿನ್ನುತ್ತಿದ್ದರು. ಭಕ್ತರು ಊಟ ಮಾಡುವುದಕ್ಕೆ ಮುನ್ನ ತಾವು ಊಟ ಮಾಡುತ್ತಿರಲಿಲ್ಲ. ಒಂದು ವೇಳೆ ಏಕಕಾಲಕ್ಕೆ ಪಕ್ಕದ ಕೋಣೆಯಲ್ಲಿ ಅವರು ಕುಳಿತರೂ, ಅವರ ಮನಸ್ಸು ಭಕ್ತರ

ಭೋಜನದ ಕಡೆಗೆ ಇರುತ್ತಿತ್ತು – ಅವರು ಏನು ತಿಂದರೊ ಬಿಟ್ಟರೊ, ಯಾರಿಗೇನು ಬಡಿಸಬೇಕು, ಇತ್ಯಾದಿ. 'ಅವನ ಎಲೆಗೆ ಅದನ್ನು ಬಡಿಸು' ಎನ್ನುತ್ತಿದ್ದರು. ಹಣ ಬರುತ್ತಿತ್ತು–ಅದರ ಲೆಕ್ಕ ವಿಡುತ್ತಿರಲಿಲ್ಲ. ೫ ರೂಪಾಯಿಗಳ ಬದಲು ೭ ರೂಪಾಯಿಗಳನ್ನು ಕೊಡುತ್ತಿದ್ದರು. ಸಂಚಯ ಮಾಡುವ ಬುದ್ಧಿ ಅವರಿಗಿರಲಿಲ್ಲ. ಇತರರಿಗೆ ನೀಡುವುದರಲ್ಲಿ ಅವರದು ಮುಕ್ತಹಸ್ತ.

''ಯಾರೇ ಕಷ್ಟದಲ್ಲಿದ್ದರೂ ಶ್ರೀಮಾತೆಯವರು ಸಹಿಸುತ್ತಿರಲಿಲ್ಲ. ಸಿಂಧೂಬಾಲಾಳ ಕಷ್ಟಗಳನ್ನು ಕೇಳಿ ವ್ಯಾಕುಲರಾಗಿ ಕಂಬನಿ ಸುರಿಸುತ್ತಿದ್ದರು. ಆದ್ದರಿಂದ ಜನರ ದುಃಖ–ಕಷ್ಟಗಳ ಬಗ್ಗೆ ಅವರಿಗೆ ಹೆಚ್ಚಾಗಿ ಹೇಳುತ್ತಿರಲಿಲ್ಲ. ಯಾರಾದರೂ ಅವರಿಂದ ದೂರ ಹೊರಟರೆ, ಅವರು ಹೋದ ದಾರಿಯತ್ತಲೇ ನೋಡುತ್ತಿದ್ದರು. 'ಕಾಶಿ, ಗಯಾಕ್ಕೆ ಸುಲಭವಾಗಿ ಹೋಗಬಹುದು, ಆದರೆ ಜಯರಾಂಬಾಟಿಗೆ ಬರುವುದು ಎಷ್ಟು ಕಷ್ಟ!' ಎಂದಿದ್ದರು.

''ಒಬ್ಬ ಹುಡುಗನಿಗೆ ಶ್ರೀಮಾತೆಯವರು ಏನು ಮಾಡಿದರೂ ದೀಕ್ಷೆ ಕೊಡಲು ಒಪ್ಪಲಿಲ್ಲ. ಅವನು ಎರಡು ಗಂಟೆಗಳ ಕಾಲ ಗೋಗರೆದ ಬಳಿಕ ಶ್ರೀಮಾತೆಯವರು ಮರುದಿನ ಅವನಿಗೆ ದೀಕ್ಷೆ ನೀಡುವುದಾಗಿ ಹೇಳಿದರು. ಶ್ರೀಮಾತೆಯವರು ಅಸ್ವಸ್ಥರಾಗಿದ್ದಾಗ ಮತ್ತೊಬ್ಬ ಹುಡುಗ ದೀಕ್ಷೆಯನ್ನು ಪಡೆಯಲೇಬೇಕೆಂಬ ಹಟದಿಂದ ವಿಷ್ಣುಪುರದಿಂದ ಜಯರಾಂಬಾಟಿಗೆ ಬಂದ. ಶರತ್ ಮಹಾರಾಜರು ಅವನಿಗೆ ಎಷ್ಟು ತಿಳಿಯಹೇಳಿದರೂ ಅವನು ಬಿಡಲಾರ. ಕೊನೆಗೆ ಡಾ. ಕಾಂಜಿಲಾಲರು ಬಹಳ ಕೋಪಗೊಂಡರು. ದಿನಾಜಪುರದ ವಕೀಲರೊಬ್ಬರು ಮೊಣಕಾಲು ಮಳೆ ನೀರಿನಲ್ಲಿ ತೊಯ್ದು ತಮ್ಮ ಪತ್ನಿಯೊಂದಿಗೆ ದೀಕ್ಷೆಗಾಗಿ ಜಯರಾಂಬಾಟಿಗೆ ಬಂದರು. ಜಯರಾಂಬಾಟಿಯಲ್ಲಿ ಕ್ರಿಸ್‌ಮಸ್‌ನ ನಂತರ ದುರ್ಗಾಪೂಜೆಯ ಆಚರಣೆ ಎಂಬುದಾಗಿತ್ತು. ಜನರು ಗುಂಪುಗುಂಪಾಗಿ ಮಾತೃದರ್ಶನವನ್ನು ಬಯಸಿ ಬಂದಿದ್ದರು. ಶ್ರೀಮಾತೆಯವರು 'ಉದ್ಬೋಧನ'ದಲ್ಲಿದ್ದಾಗಲೂ ಹೀಗೆಯೇ ಆಗುತ್ತಿತ್ತು.

''ಜಯರಾಂಬಾಟಿಯಲ್ಲಿ ಜಮೀನಿನ ಬೆಲೆ ಹಾಗೂ ಉತ್ಪಾದನೆ ವೃದ್ಧಿಸಿದೆ. ಹಿಂದೆ ಜನವಸತಿ ಇಂದಿಗಿಂತಲೂ ಕಡಿಮೆಯಿತ್ತು. ಆದಾಯವೂ ಕಡಿಮೆಯೆ. ಇತರ ಗ್ರಾಮದ ಜನರು ಇಲ್ಲಿನ ಹೊಲಗದ್ದೆಗಳಲ್ಲಿ ದುಡಿಯುತ್ತಿದ್ದರು. ಕೋಯಲ್‌ಪಾರಾದ ಜಗದಂಬಾ ಆಶ್ರಮದ ಪ್ರತಿಷ್ಠಾಪನೆ ಶ್ರೀಮಾತೆಯವರ ಇಚ್ಛೆಯಿಂದಲೇ ನೆರವೇರಿತು. ಆಷಾಡಮಾಸದ ಒದ್ದೆ ಮಣ್ಣಿನಲ್ಲಿ ಭತ್ತದ ಹುಲ್ಲಿನ ಮಾಡನ್ನು ಏರಿಸಲಾಗುತ್ತಿತ್ತು. ಮಣ್ಣಿನ ಗೋಡೆ ಕುಸಿದು ಒಬ್ಬಾತನ ಮೇಲೆ ಕುಸಿದು ಬಿದ್ದು ಅವನು ಮೃತನಾದನು. ರಾಸಬಿಹಾರಿ ಹಾಗೂ ಹೇಮೇಂದ್ರ ಶ್ರೀಮಾತೆಯವರಿಗಾಗಿ ಹೊಸ ಮನೆಯನ್ನು ಕಟ್ಟಿದರು. ಹೊಸ ಮಂಚ, ಹಾಸಿಗೆ ಮೊದಲಾದವುಗಳನ್ನು ಕೊಂಡುಕೊಳ್ಳಲಾಯಿತು. ಪ್ರಸನ್ನ ಮಾವನ ಹೆಂಡತಿಯ ಬೈಗುಳಗಳನ್ನು ಸಹಿಸಲಾಗದೆ ಶ್ರೀಮಾತೆಯವರು ಹೊಸ ಮನೆಗೆ ಹೋದರು. ತಮಗೆ ಬಂದ ಹಣವನ್ನೆಲ್ಲಾ ಮಾವಂದಿರಿಗೆ ಕೊಡುತ್ತಿದ್ದರು; ಅದರಿಂದಲೇ ಮಾವಂದಿರ ಎರಡಂತಸ್ತಿನ ಮನೆ ಇತ್ಯಾದಿಗಳನ್ನು ಕಟ್ಟಲಾಯಿತು. ಶ್ರೀಮಾತೆಯವರ ಸವಿನುಡಿಗಳನ್ನು ಧ್ಯಾನದಿಂದ ಸವಿಯಲು ಸಾಧ್ಯವೆ? ಅವರ ಮಹಾಸಮಾಧಿಯ ಎರಡು ದಿನಗಳ ಹಿಂದೆ ಮಹಾಪುರುಷ ಮಹಾರಾಜರು ಹೇಳಿದರು, 'ಶ್ರೀಮಾತೆಯವರು ಈ ಜಗತ್ತನ್ನೇ ತಮ್ಮದಾಗಿಸಿಕೊಂಡು ಎಲ್ಲರಿಂದಲೂ ಸೇವೆಯನ್ನು ಸ್ವೀಕರಿಸುತ್ತಿರುವರು.'

''ಒಂದು ದಿನ ನಾನು ಶ್ರೀಮಾತೆಯವರ ಬಳಿ ಕುಳಿತು ಕಡಲೆಪುರಿ ತಿನ್ನುತ್ತಿದ್ದೆ. ಆಗ ಭಿಕ್ಷುಕನೊಬ್ಬ ಭಿಕ್ಷೆ ಬೇಡಿದಾಗ ಭಾವಮಗ್ನರಾಗಿದ್ದ ಶ್ರೀಮಾತೆಯವರು, 'ನನಗೇನು ಎರಡೆ ಕೈಗಳೆ? ನಾನು ಅನೇಕ ಕೈಗಳಿಂದ ಕೆಲಸ ಮಾಡುತ್ತಿರುವೆ,' ಎಂದರು. ಕೂಡಲೆ ತಮ್ಮನ್ನು ತಾವೇ ಸಾವರಿಸಿಕೊಂಡು, 'ಇದೇನು ಹೇಳುತ್ತಿರುವೆ? ನನಗೆ ಇನ್ನೆಷ್ಟು ಕೈಗಳಿವೆ? ನನಗೆ ಎರಡೇ ಕೈಗಳು' ಎಂದರು.

''ಶ್ರೀಮಾತೆಯವರು ಕೋಯಲ್‌ಪಾರಾದಿಂದ 'ಉದ್ಬೋಧನ'ಕ್ಕೆ ಹೋದಾಗ ಭಕ್ತ–ಮಕ್ಕಳು ಕಂಬನಿಗರೆದರೆ ಶ್ರೀಮಾತೆಯವರು, 'ಅಳಬೇಡಿ, ನಾನು ಪುನಃ ಬರುತ್ತೇನೆ' ಎನ್ನುತ್ತಿದ್ದರು. ಆದರೆ ಕಡೆಯ ಬಾರಿ ಹೋದಾಗ ಈ ಮಾತುಗಳನ್ನು ಹೇಳಲಿಲ್ಲ.

''ಕೋಯಾಲ್‌ಪಾರಾ ಆಶ್ರಮದಲ್ಲಿ ಕೇಶವಾನಂದ ಹಾಗೂ ರಾಜೇನ್ ದಾದಾ ಇವರ ನಡುವೆ ಮನಸ್ತಾಪ ಹೆಚ್ಚಿತು. ಇದನ್ನು ಹೇಗೋ ತಿಳಿದ ಶ್ರೀಮಾತೆಯವರು ನಳಿನಿಗೆ ಹೇಳಿದರು, 'ಅವರಿಬ್ಬರ ಮಧ್ಯೆ ಏನೋ ಮನಸ್ತಾಪವಾಗಿದೆ.'

''ಅಂದು ಮಾನಸಾದೇವಿಯ ಪೂಜೆ. ಶ್ರೀಮಾತೆಯವರು ಜಯರಾಂಬಾಟಿಯಲ್ಲಿದ್ದಾರೆ. ಅವರಿಗೆ ಅರ್ಪಿಸಲು ನಾನಾ ಬಗೆಯ ಪುಷ್ಪಗಳನ್ನು ಕೊಯ್ದು ತಂದೆ. ಆ ದಿನ ಭಾರಿ ಮಳೆ. ಶ್ರೀಮಾತೆಯವರ ಪಾದಗಳಲ್ಲಿ ಪುಷ್ಪಾಂಜಲಿಯನ್ನರ್ಪಿಸಿದೆ. ನನ್ನ ನಂತರ ಭಕ್ತರೂ ಪುಷ್ಪಾಂಜಲಿಯನ್ನರ್ಪಿಸಿದರು. ಶ್ರೀಮಾತೆಯವರು ಕೇಳಿದರು, 'ಇಂದೇನು ವಿಶೇಷ? ಇವತ್ತು ಮಾನಸಾಪೂಜೆಯೆಂದೇನು?' ಅವರ ಮಾತುಗಳು ಯಾರ ಕಿವಿಗೂ ಬೀಳಲಿಲ್ಲ!

''ನಳಿನಿ ಅಕ್ಕ ಶ್ರೀಮಾತೆಯವರನ್ನು ಬಹಳ ಪೀಡಿಸಿದ್ದರು. ರಾತ್ರಿಯಾಗಿಬಿಟ್ಟಿದೆ. ಗೋಪೇಶ ಅಣ್ಣ ಮುಂತಾದವರು ಶ್ರೀಮಾತೆಯವರಿಗಾಗಿ ಬಹಳ ನೊಂದಿದ್ದು ನಳಿನಿಯ ವರ್ತನೆಯ ಬಗ್ಗೆ ಕ್ರುದ್ಧರಾಗಿದ್ದರು. ಆದರೆ ರಾತ್ರಿ ಶ್ರೀಮಾತೆಯವರು 'ನಳಿನಿ, ಓ ನಳಿನಿ' ಎಂದು ಮಧುರವಾಗಿ ಅವಳನ್ನು ಕರೆಯತೊಡಗಿದರು. 'ಅವಳಿನ್ನೂ ಚಿಕ್ಕವಳು. ಆದ್ದರಿಂದಲೇ ಹೀಗೆ ಮಾಡುತ್ತಾಳೆ' ಎಂದರು.

''ಮುಂದೆ ಶ್ರೀಮಾತೆಯವರಿಂದ ದೀಕ್ಷೆ ಪಡೆದ ಒಬ್ಬ ಭಕ್ತನು ಒಂದು ದಿನ, 'ಠಾಕೂರರು ಹಾಗೂ ಶ್ರೀಮಾತೆಯವರು ನಿಜವಾಗಿಯೂ ಆಹಾರವನ್ನು ಗ್ರಹಿಸುವರೆ ಇಲ್ಲವೆ ಎಂದು ನೋಡುತ್ತೇನೆ; ಇಂದು ಅವರು ತಿನ್ನದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವೆ' ಎಂದು ಪ್ರತಿಜ್ಞೆ ಮಾಡಿದ. ಅದು ಭಾನುವಾರ ರಜಾ ದಿನ. ಮಧ್ಯಾಹ್ನದ ಎರಡು ಗಂಟೆಯಾದರೂ ಯಾವ ಚಿಹ್ನೆಯೂ ಇಲ್ಲ! ನಂತರ ನೋಡುತ್ತಾನೆ, ಠಾಕೂರರು ಹಾಗೂ ಶ್ರೀಮಾತೆಯವರ ಕಣ್ಣುಗಳಿಂದ (ಚಿತ್ರದ ಮೂಲಕ) ಕಿರಣವೊಂದು ಹೊರಹೊಮ್ಮಿ, ನಿವೇದಿಸಲಾಗಿದ್ದ ಅನ್ನ-ಪದಾರ್ಥಗಳನ್ನು ಸ್ಪರ್ಶಿಸಿತು.''

**ಉದ್ಬೋಧನ, ೧೯೨೩**

**ಪ್ರಶ್ನೆ:** ಭಗವಂತನು ನಮ್ಮ ಪ್ರಾರ್ಥನೆಗಳನ್ನೆಲ್ಲ ಕೇಳುವನೆ?

**ಶರತ್ ಮಹಾರಾಜ್:** ಎಲ್ಲವನ್ನೂ ಕೇಳುತ್ತಾನೆ, ಆದರೆ ಉತ್ತರ ನೀಡುವುದಿಲ್ಲ. ಎಲ್ಲಾ ಪ್ರಾರ್ಥನೆಗಳನ್ನು ಪೂರೈಸುವುದಿಲ್ಲ. ವ್ಯಕ್ತಿಯ ರೋಗವು ಉಲ್ಬಣಗೊಂಡಾಗ ಅವನು ಕೇಳಿದ್ದನ್ನೆಲ್ಲ ವೈದ್ಯರು ಕೊಡುವರೇನು? ಒಳ್ಳೆಯದೇನೆಂದು ಆತನಿಗೆ ತಿಳಿದಿದೆ. ಠಾಕೂರರ ಆ ಚಿಕ್ಕ ಬಾಲಕನ ದರ್ಶನದಂತೆ, ಬೇಡಿದವನಿಗೆ ಆ ಬಂಗಾರದ ನಾಣ್ಯವನ್ನು ಕೊಡುವುದಿಲ್ಲ, ಕೇಳದವನಿಗೆ ಕೊಟ್ಟುಬಿಡುವನು. ಸಮಯ ಬಾರದೆ ಏನೂ ಸಿದ್ಧಿಸದು. ನೀನು 'ಬೇಕು' ಎಂದು ಕೇಳುವುದಾದರೂ ಏಕೆ? ಭಗವಂತನನ್ನು ನಿಃಸ್ವಾರ್ಥವಾಗಿ ಪ್ರೀತಿಸಬೇಕು.

ಮುಂದಿನ ಭಾನುವಾರ (೨ನೇ ವೈಶಾಖ) ಶರತ್ ಮಹಾರಾಜರು ಮೊದಲಾದವರು ಜಯರಾಂಬಾಟಿಗೆ ಹೋಗಲು ನಿಶ್ಚಯಿಸಿದರು. ಸಂಜೆ ನೋಡಿದರೆ, ಬಹಳ ಹೊತ್ತು ಶ್ರೀಮಾತೆಯವರ ಪಟದ ಹತ್ತಿರ ಕೈಮುಗಿದು ನಿಂತಿದ್ದಾರೆ. ಶ್ರೀಮಾತೆಯವರ ಹಾಸಿಗೆ ಹಾಗೂ ಅವರ ಪದಚಿಹ್ನೆಯನ್ನು ಸ್ಪರ್ಶಿಸಿ ಹಣೆಗೊತ್ತಿಕೊಂಡರು. ಪ್ರಣಾಮ ಸಲ್ಲಿಸಿದರು. ಶ್ರೀಮಾತೆಯವರ ಕೋಣೆಯಲ್ಲಿದ್ದ ಜಗದ್ಧಾತ್ರಿಯ ವಿಗ್ರಹಕ್ಕೆ ನಮಸ್ಕರಿಸಿದರು.

**ಉಜಯರಾಂಬಾಟಿ ಶ್ರೀಮಾತೆಯವರ ಮಂದಿರ ಪ್ರತಿಷ್ಠಾಪನೆ, ೧೯೨೩.**

ಜಯರಾಂಬಾಟಿಯಲ್ಲಿ ಮಹಾಶಕ್ತಿಯ ಲೀಲಾವಸಾನವಾಯಿತು.

**ಯೋಗಿನ್ ಮಾ:** 'ದೂರದಿಂದ ಕಷ್ಟಪಟ್ಟು ಜನರು ಬಂದಿದ್ದಾರೆ- ಹೇಗೆ ತಾನೆ ಇವರಿಗೆ ಹಿಂದಿರುಗಲು ಹೇಳಲಿ?' ಎನ್ನುತ್ತ ಶ್ರೀಮಾತೆಯವರು ಅವರಿಗೆ ದೀಕ್ಷೆಯನ್ನು ನೀಡುತ್ತಿದ್ದರು.

**ಶರತ್ ಮಹಾರಾಜ್:** ನಾನು ಕೂಡ ಹಾಗೆಂದುಕೊಂಡೇ ದೀಕ್ಷೆಯನ್ನು ನೀಡಿರುವೆ. ಅವರಿದ್ದಿದ್ದರೆ ಏನು ಮಾಡುತ್ತಿದ್ದರು? ಆಕೆಯ ಕಾರ್ಯ, ಆಕೆಯ ಬಳಿ ಬಂದಿದ್ದಾರೆ. ನನ್ನದೆಂಬುದೇನಾದರೂ ಉಂಟೆ ?

**ಹರಿಪ್ರೇಮ ಮಹಾರಾಜರು:** ರಾಧುವಿನಿಂದಾಗಿ ಶ್ರೀಮಾತೆಯವರು ಕೊನೆಗೆ ಬಹಳವೆ ಕಷ್ಟಪಟ್ಟಿದ್ದರು. ಜಪ ಮಾಡುವಾಗ 'ರಾಧುವನ್ನು ಇಲ್ಲವೆ ನನ್ನನ್ನು ಕರೆಸಿಕೊ' ಎಂದು ದೇವರಲ್ಲಿ ಮೊರೆಯಿಡುತ್ತಿದ್ದರು. ಕೊನೆಗೆ ಅಸ್ವಸ್ಥರಾಗಿದ್ದಾಗ ಜಯರಾಂಬಾಟಿಯ ಬಾವಿಯ ನೀರು ದೊರೆತಾಗ, 'ನಾನಿನ್ನು ಜಯರಾಂಬಾಟಿಗೆ ಹೋಗುವೆನೆ?' ಎಂದಿದ್ದರು.

* * *

ದುರ್ಗಾಪೂಜೆಯಂದು ಅನೇಕ ಸ್ಥಳಗಳಿಂದ ಹೂ ಕೊಯ್ದು ತಂದೆ. ಪ್ರಸಾದ ವಿತರಣೆಯ ಜವಾಬ್ದಾರಿಯು ನನ್ನದಾಗಿತ್ತು. ಶರತ್ ಮಹಾರಾಜರು ದೀಕ್ಷೆ ನೀಡುತ್ತಿದ್ದಾರೆ. ಕೈಯಲ್ಲಿ ಹೂ ತೆಗೆದುಕೊಂಡು ದೀಕ್ಷಾರ್ಥಿಗಳು ೮ ರಿಂದ ೨ ಗಂಟೆಯವರೆಗೆ ಕಾಯುತ್ತಿದ್ದಾರೆ. ಹಿಂದಿನ ದಿನ ಗಣೇಶ ಪೂಜೆಯು ಮುಗಿದಿದೆ. ಕಪಿಲ ಮಹಾರಾಜರು (ಸ್ವಾಮಿ ವಿಶ್ವೇಶ್ವರಾನಂದರು) ಸ್ತೋತ್ರಗಳನ್ನು ಪಠಿಸುತ್ತಿದ್ದಾರೆ-ಅಶ್ರುಭರಿತ ಕಣ್ಣುಗಳಿಂದ ಶ್ರೀಮಾತೆ ಹಾಗೂ ಠಾಕೂರರ ಆವಾಹನೆ ಮಾಡುತ್ತಿದ್ದಾರೆ.

ದೀಕ್ಷಾನಂತರ ಶರತ್ ಮಹಾರಾಜರನ್ನು ನೋಡಿ ಕಷ್ಟವೆನಿಸಿತು. ಶರೀರ ಬಿದ್ದರೆ ಬೀಳಲಿ, ಶ್ರೀಮಾತೆಯವರ ಕಾರ್ಯವನ್ನು ಮಾಡುತ್ತ ಹೋಗುವೆನೆಂಬ ಭಾವ ಅವರಲ್ಲಿತ್ತು. ಭೂಮಾನಂದರು ಹೇಳಿದರು, ''ಮಹಾರಾಜರೊಂದಿಗೆ ಅನೇಕ ಸಲ ಜಯರಾಂಬಾಟಿಗೆ ಬಂದಿರುವೆನಾದರೂ ಇಂಥ ಮಾತೃಪ್ರೇಮ, ಕರುಣೆಯನ್ನೆಂದೂ ನೋಡಿಲ್ಲ. ಮಹಾರಾಜರನ್ನು ಕಾಣುವ ಬಯಕೆಯಿಂದ ಸುತ್ತಮುತ್ತಲಿನ ಗ್ರಾಮಗಳ ಜನಸಮೂಹವೇ ಅಲ್ಲಿ ಬಂದುಸೇರುತ್ತಿತ್ತು. ಪ್ರಸಾದದ ಕಣಗಳನ್ನು ಸ್ವೀಕರಿಸುತ್ತಿದ್ದಾರೆ. ಆರತಿ ಮುಂತಾದವುಗಳ ವೇಳೆ ಲೋಕಾರಣ್ಯವೆ ನೆರೆದಿದೆ. ರಾತ್ರಿ ೧೨ ಗಂಟೆಯವರೆಗೂ ಪ್ರಸಾದ ವಿತರಿಸಲಾಗುತ್ತಿತ್ತು. ''

*(ಮುಂದುವರಿಯುವುದು)*

''ಧ್ಯಾನ ಮಾಡುವುದಕ್ಕೆ ಮೊದಲು ಶ್ರೀರಾಮಕೃಷ್ಣರನ್ನು ನೆನೆ. ನೀನು ಹೀಗೆ ಮಾಡಿದರೆ, ಏನು ಮಾಡಿದರೂ ಅದರಿಂದ ಉತ್ತಮ ಫಲವುಂಟಾಗುವುದು. ಅವರು ಎಲ್ಲದರಲ್ಲೂ, ಎಲ್ಲೆಲ್ಲೂ ಇರುವರೆಂದೂ, ಸಮುದ್ರದಲ್ಲಿ ಒಂದು ಗಡಿಗೆ ಮುಳುಗಿರುವಂತೆ ನೀನು ಅವರಲ್ಲಿ ಮುಳುಗಿರುವೆ ಎಂದೂ ಕೆಲವು ಸಲ ಚಿಂತಿಸು. ಸರ್ವವ್ಯಾಪಕನಾದ ಭಗವಂತನ ಅತ್ಯುನ್ನತ ಸ್ಥಿತಿಯೆಂದರೆ ಅನಂತ ಆಕಾಶದಂತೆ ಎಂದು ಭಾವಿಸು. ಅವನಿಗೆ ನಿನ್ನ ಕುರಿತು ಎಲ್ಲವೂ ತಿಳಿದಿದೆ. ಅವನಿಂದ ನೀನು ಏನನ್ನೂ ಮುಚ್ಚಿಡಲಾರೆ. ಅವನಿಗೆ ನಿನ್ನ ಒಳಗೆ ಅತಿ ಆಳದಲ್ಲಿ ಅಡಗಿರುವ ಸಂಗತಿಯೂ ತಿಳಿದಿರುತ್ತದೆ.''

— ಸ್ವಾಮಿ ಶಾರದಾನಂದ